PAPER CLIPPINGS
DEPARTMENT / SUBJECT:
NAME OF THE NEWS PAPER:
DATE : 11/03/2020

## ವಿಧಾನಸಭೆಯಲ್ಲಿ ಗದ್ದಲ– ಕೂಗಾಟ ● ಬಿಜೆಪಿ ಮತ್ತು ಕಾಂಗ್ರೆಸ್‌ನಿಂದ ಪರಸ್ಪರ ಹಕ್ಕುಚ್ಯುತಿ

# ಕೀಳು ಮಟ್ಟದ ಬೈಗುಳ: ಬಲಿಯಾದ ಕಲಾಪ

ಪ್ರ.ವಾ. 11-3-2020

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಲ್ಲಿ ಸಂವಿಧಾನ ಮೇಲಿನ ಚರ್ಚೆಯ ವೇಳೆ ಶಾಸಕರ ಅನರ್ಹತೆ ವಿಷಯ ಪ್ರಸ್ತಾಪವಾಗಿ ವೈದ್ಯಕೀಯ ಸಚಿವ ಡಾ.ಕೆ.ಸುಧಾಕರ್ ಮತ್ತು ಕಾಂಗ್ರೆಸ್‌ನ ಕೆ.ಆರ್.ರಮೇಶ್ ಕುಮಾರ್ ಮಧ್ಯೆ ಮಾತಿಗೆ ಮಾತು ಬೆಳೆದು, ಗದ್ದಲ, ಕೂಗಾಟದಿಂದ ಸದನ ಗೊಂದಲದ ಗೂಡಾಯಿತು.

ರಮೇಶ್‌ಕುಮಾರ್‌ಅವರುರೋಷಾವೇಶದಿಂದ ಅಬ್ಬರಿಸಿ, ತೋಳೇರಿಸಿದ್ದೂ ಅಲ್ಲದೆ ಸುಧಾಕರ್ ವಿರುದ್ಧ ಆಕ್ಷೇಪಾರ್ಹ ಬೈಗುಳ ಬಳಸಿದ್ದಕ್ಕೆ ಸದನ ಸಾಕ್ಷಿಯಾಯಿತು. ಇದಕ್ಕೆ ಪ್ರತಿಯಾಗಿ ಸುಧಾಕರ್ ಏಕವಚನದಲ್ಲಿ ರಮೇಶ್ ಕುಮಾರ್ ಅವರನ್ನು ನಿಂದಿಸಿದರು.

ಹೊಸ ಸಚಿವರೆಲ್ಲರೂ ಸುಧಾಕರ್ ಅವರ ನೆರವಿಗೆ ಧಾವಿಸಿ, ಅತ್ಯಂತ ಕೀಳುಮಟ್ಟದ ಪದ ಬಳಸಿದ ರಮೇಶ್ ಕುಮಾರ್ ಅವರನ್ನು ಅಮಾನತು-ಗೊಳಿಸಬೇಕು ಎಂದು ಆಗ್ರಹಿಸಿದರು. ಕಾಂಗ್ರೆಸ್– ಬಿಜೆಪಿ ಸದಸ್ಯರು ಪರಸ್ಪರ ಗದ್ದಲದಲ್ಲಿ ತೊಡಗಿದ್ದರಿಂದ ಎರಡು ಬಾರಿ ಕಲಾಪ ಮುಂದೂಡಿಕೆ ಆಯಿತು.

'ನನ್ನನ್ನೂ ಸೇರಿದಂತೆ 17 ಜನರನ್ನು ಅನರ್ಹಗೊಳಿಸುವ ಮೂಲಕ ಈ ಪೀಠದಿಂದ (ಸಭಾಧ್ಯಕ್ಷ) ಅನ್ಯಾಯ ಆಗಿದೆ. ಶಾಸಕರು ರಾಜೀನಾಮೆ ನೀಡಿದ ಸಂದರ್ಭದಲ್ಲಿ ಸಭಾಧ್ಯಕ್ಷರು ವಹಿಸಬೇಕಾದ ಇತಿಮಿತಿಯ ಪಾತ್ರವನ್ನು ಸುಪ್ರೀಂಕೋರ್ಟ್ ಹೇಳಿದೆ. ಆದರೆ, ಅವರು ನಮ್ಮ ರಾಜಕೀಯ ಜೀವನ ಹಾಳು ಮಾಡಿದರು. ಸಭಾಧ್ಯಕ್ಷರಾಗಿ ವರ್ತಿಸಲಿಲ್ಲ. ರಾಜಕೀಯ ಷಡ್ಯಂತ್ರದ ಭಾಗವಾಗಿ ಕೆಲಸ ಮಾಡಿದರು' ಎಂದು ಸುಧಾಕರ್ ಆಕ್ರೋಶ ವ್ಯಕ್ತಪಡಿಸಿದರು.

ಮೊಗಸಾಲೆಯಲ್ಲಿ ಚಹ ಕುಡಿಯುತ್ತಾ ಟಿ.ವಿಯಲ್ಲಿ ಕಲಾಪ ವೀಕ್ಷಿಸುತ್ತಿದ್ದ ರಮೇಶ್ ಕುಮಾರ್ ತಕ್ಷಣವೇ ಆವೇಶದಿಂದಲೇ ಸದನದ ಒಳಗೆ ಬಂದರು. ಅ ವೇಳೆಗೆ ಕಾಂಗ್ರೆಸ್‌ನ ಇತರ ಸದಸ್ಯರು 'ನೀವು ದುಡ್ಡಿನ ಆಸೆ ಮತ್ತು ಅಧಿಕಾರದ ಆಸೆಗೆ ಪಕ್ಷವನ್ನು ಬಿಟ್ಟು ಹೋದಿರಿ. ನಿಮಗೆ ಮಾತನಾಡಲು ನೈತಿಕ ಅಧಿಕಾರವಿಲ್ಲ' ಎಂದರು.

ಕೋಪದಿಂದ ಕುದಿಯುತ್ತಿದ್ದ ರಮೇಶ್ ಕುಮಾರ್, 'ಈ ವಿಷಯ ಚರ್ಚೆ ಮಾಡುವ ಹಾಗಿದ್ದರೆ ನಡೆಯಲಿ. ಸುಪ್ರೀಂಕೋರ್ಟ್ ಜಡ್ಜ್‌ಮೆಂಟ್ ಇಲ್ಲಿ ಪ್ರಸ್ತಾಪ ಮಾಡಬಹುದಾ ಕಾನೂನು ಸಚಿವರೇ ಹೇಳಿ' ಎಂದು ಮಾಧುಸ್ವಾಮಿ ಅವರನ್ನು ಪ್ರಶ್ನಿಸಿದರು.

ಮಾಧುಸ್ವಾಮಿ ಕೈಯಾಡಿಸಿ ಸುಮ್ಮನಾದರು. ಆಗ ರಮೇಶ್ ಕುಮಾರ್ ಮತ್ತು ಸುಧಾಕರ್ ಮಧ್ಯೆ ವೈಯಕ್ತಿಕ ನಿಂದನೆ ತಾರಕಕ್ಕೆ ಏರಿತು.

ಕೋಪದಿಂದ ತೋಳೇರಿಸಿದ ರಮೇಶ್ ಕುಮಾರ್, ಆಕ್ಷೇಪಾರ್ಹ ಬೈಗುಳ ಬಳಸಿ ಸಭಾಧ್ಯಕ್ಷರ ಪೀಠದ ಮುಂದೆ ಧರಣಿಗೆ ಮುಂದಾದರು.

ಸಚಿವ ಸುಧಾಕರ್ ಸಭಾಧ್ಯಕ್ಷರ ಪೀಠಕ್ಕೆ ಅಗೌರವ ತೋರಿದ್ದಾರೆ. ರಮೇಶ್ ಕುಮಾರ್ ವಿರುದ್ಧ ಅವಹೇಳನ ಮಾತು ಆಡಿದ್ದರಿಂದ ಹಕ್ಕುಚ್ಯುತಿ ನೋಟಿಸ್ ನೀಡಿದ್ದೇವೆ
**ಸಿದ್ದರಾಮಯ್ಯ**, ವಿರೋಧ ಪಕ್ಷದ ನಾಯಕ

ಕೆಲವು ತಿಂಗಳ ಹಿಂದೆ ಲಂಡನ್‌ನಲ್ಲಿ ರಾಹುಲ್ ಗಾಂಧಿಗೆ ಸಲಹೆ ಕೊಡುತ್ತಿದ್ದ ಆಸಾಮಿ ಪಕ್ಷಕ್ಕೆ ದ್ರೋಹ ಎಸಗಿ ಈಗ ಕಾಂಗ್ರೆಸ್ ಬಗ್ಗೆ ಟೀಕೆ ಮಾಡಲು ಬಂದಿದ್ದಾನೆ
**ರಮೇಶ್ ಕುಮಾರ್**, ಶಾಸಕ

ರಮೇಶ್ ಕುಮಾರ್ ಕೀಳು ಮಟ್ಟದ ಬೈಗುಳ ಬಳಸಿ ನಿಂದಿಸಿದ್ದಾರೆ. ಅವರ ವಿರುದ್ಧ ಹಕ್ಕುಚ್ಯುತಿ ನೋಟಿಸ್ ನೀಡಿದ್ದೇನೆ. ಪದ ಹಿಂಪಡೆಯುವ ತನಕ ಬಿಡುವುದಿಲ್ಲ
**ಡಾ.ಕೆ.ಸುಧಾಕರ್**, ಸಚಿವ

ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರ ಮಧ್ಯೆ ಘೋಷಣೆ, ಧಿಕ್ಕಾರಗಳು ತಾರಕಕ್ಕೇರಿದವು. ಬಿಜೆಪಿ ಸದಸ್ಯರು 'ರಮೇಶ್ ಕುಮಾರ್ ಅವರೇ ಗೂಂಡಾಗಿರಿ ನಿಲ್ಲಿಸಿ' ಎಂದು ಘೋಷಣೆ ಹಾಕಿದರು.

'ಬಿಜೆಪಿಗೆ ಧಿಕ್ಕಾರ' ಎಂದು ಕಾಂಗ್ರೆಸ್ ಸದಸ್ಯರು ಪ್ರತಿ ಘೋಷಣೆ ಹಾಕಿದರು.ಎರಡು ಬಾರಿ ಕಲಾಪ ಮುಂದೂಡಲಾಯಿತು.

### ಸುಧಾಕರ್– ರಮೇಶ್‌ಕುಮಾರ್ ಜಟಾಪಟಿ

- ನೀವು ತುರ್ತುಪರಿಸ್ಥಿತಿ ಹೇರಿದವರು. ರಾಜಕೀಯ ವ್ಯಕ್ತಿಗಳನ್ನು, ಹೋರಾಟಗಾರರನ್ನು ಮತ್ತು ಪತ್ರಕರ್ತರನ್ನು ಜೈಲಿಗೆ ತಳ್ಳಿದಿರಿ.
- ಪೌರತ್ವ ಕಾಯ್ದೆಯನ್ನು ಸಂಸತ್ತಿನಲ್ಲಿ ಒಪ್ಪಿಗೆ ಪಡೆದು ಜಾರಿ ಮಾಡಲಾಯಿತು. ಈ ದೇಶವನ್ನು ಬಹು ಕಾಲ ಆಳಿದ ಪ್ರಮುಖ ಪಕ್ಷ ಒಂದು ವರ್ಗದ ಜನರಿಗೆ ಕುಮ್ಮಕ್ಕು ನೀಡಿ ಗಲಭೆಗೆ ಪ್ರಚೋದಿಸಿತು.
- 17 ಶಾಸಕರ ಜೀವನ ಹಾಳು ಮಾಡಿದರು. ಇದಕ್ಕೆ ರಾಜಕೀಯ ಷಡ್ಯಂತ್ರವೇ ಕಾರಣ.
- ನೀವು ದೊಡ್ಡ ಡ್ರಾಮಾ ಮಾಸ್ಟರ್.
- ನೀನು ತಲೆಹಿಡುಕ (ರಮೇಶ್ ಕುಮಾರ್ ದಾದಾಗಿರಿ ಮಾಡಬೇಡಿ ಎಂದು ಬಿಜೆಪಿ ಸದಸ್ಯರು ಘೋಷಣೆ ಹಾಕಿದರು)
- ನೀನು ಏನೇನು ಮಾಡಿದ್ದೀಯ, ನಿನ್ನ ಸಾಚಾತನ ಏನು ಎಂಬುದು ಗೊತ್ತು (ಸಿಟ್ಟಿನಿಂದ ಬೆವರಲಾರಂಭಿಸಿದರು. ಕುಳಿತು ಕರವಸ್ತ್ರದಿಂದ ಮುಖ ಒರಸಿಕೊಂಡರು)
- ತುರ್ತು ಪರಿಸ್ಥಿತಿ ಬಗ್ಗೆ ಮಾತನಾಡಲು ನಿನಗೆ ಏನು ಯೋಗ್ಯತೆ ಇದೆ. ಸುರೇಶ್ ಕುಮಾರ್, ಈಶ್ವರಪ್ಪ, ಯಡಿಯೂರಪ್ಪ ತುರ್ತು ಪರಿಸ್ಥಿತಿಯಲ್ಲಿ ಜೈಲಿಗೆ ಹೋದವರು. ಅವರು ಮಾತನಾಡಬಹುದು
- ಪೌರತ್ವ ಕಾಯ್ದೆಯ ವಿರುದ್ಧ ಮಾತನಾಡುವುದು ನಮ್ಮ ಹಕ್ಕು. ನಮ್ಮ ಪಕ್ಷದ ಸಿದ್ಧಾಂತ, ನಂಬಿಕೆ ಮತ್ತು ನಿಲುವಿನ ಪ್ರಕಾರ ಮಾತನಾಡುತ್ತೇವೆ. ಅದನ್ನು ಹೇಳಲು ನೀವು ಯಾರು
- ಇಲ್ಲಿ ಇದು ಚರ್ಚೆ ಮಾಡುವ ವಿಷಯವಾ? ಚರ್ಚೆ ಆಗೋದಿದ್ರೆ ಆಗಲಿ. ಜಡ್ಜ್‌ಮೆಂಟ್ ಬಗ್ಗೆ ಇಲ್ಲಿ ಮಾತನಾಡಬಹುದಾ?
- .... (ಆಕ್ಷೇಪ ಪದ) ನೀನು ಮಾತನಾಡ್ತೀಯ... .(ಆಕ್ಷೇಪ ಪದ) ತಲೆ ಹಿಡುಕ ( ಎಂದು ಹೇಳುತ್ತಲೇ ಕೋಪದಿಂದ ಕುದಿಯುತ್ತಾ ಸಭಾಧ್ಯಕ್ಷ ಪೀಠದ ಬಳಿ ಬಂದರು)
- ನಾನು ರಾಜೀನಾಮೆ ಕೊಟ್ಟು ಹೋಗುತ್ತೇನೆ (ಅಬ್ಬರಿಸಿದ ರಮೇಶ್ ಕುಮಾರ್ ಅವರನ್ನು ಎಚ್.ಕೆ.ಪಾಟೀಲ ಹೊರಗೆ ಕರೆದುಕೊಂಡು ಹೋದರು)



